

# ಕಳ್ಳ ಮತ್ತು ಸತ್ಯ

ಒಂದೂರಲ್ಲಿ ಒಬ್ಬ ಕಳ್ಳನಿದ್ದ. ಆ ರಾಜ್ಯದ ಪ್ರಜೆಗಳ ಮನೆಗಳ್ಳತನ ಮಾಡಿ ಬದುಕುವುದೇ ಅವನ ನಿತ್ಯ ಕಾಯಕ. ಒಂದು ದಿನ ಸಂಜೆ ಹೀಗೆಯೇ ಅಲೆಯುತ್ತಿದ್ದಾಗ ಸಮೀಪದ ದೇವಸ್ಥಾನವೊಂದರಲ್ಲಿ ಒಬ್ಬ ಸ್ವಾಮೀಜಿಯ ಪ್ರವಚನ ನಡೆದಿತ್ತು. ಕಳ್ಳ ಕ್ಷಣ ಕಾಲ ಆಲಿಸಿದ. ನ್ಯಾಯ, ನೀತಿ, ಧರ್ಮ, ಸನ್ಮಾರ್ಗ, ಪಾಪ, ಪುಣ್ಯಗಳ ಕುರಿತು ಅವರಾಡಿದ ಅದ್ಭುತ ನುಡಿಗಳು ಕಳ್ಳನ ಮನದಾಳಕ್ಕೆ ಪ್ರಭಾವ ಬೀರಿದವು.

ಪ್ರವಚನ ಮುಗಿದು ಎಲ್ಲರೂ ನಿರ್ಗಮಿಸಿದ ನಂತರ ಸ್ವಾಮೀಜಿಯವರ ಪಾದಕ್ಕೆ ನಮಸ್ಕರಿಸಿ 'ಸ್ವಾಮೀಜಿ, ನಾನೊಬ್ಬ ಕಳ್ಳ, ಪರಮಪಾಪಿ, ಕಳವು ಮಾಡದೇ ಬದುಕುವ ಬೇರೆ ದಾರಿ ನನಗೆ ಗೊತ್ತಿಲ್ಲ. ನಾನು ಸಜ್ಜನನಾಗಬೇಕಿದೆ. ಕಳ್ಳತನದ ಹೊರತಾಗಿ ಬೇರೆ ಮಾರ್ಗ ತೋರಿಸಿ' ಎಂದ.

ಸ್ವಾಮೀಜಿ ಕ್ಷಣ ಕಾಲ ಇವನನ್ನೇ ದಿಟ್ಟಿಸಿ ನೋಡಿ 'ಮಗೂ, ಕಳ್ಳತನ ಬಿಡಲಾರೆ ಎನ್ನುತ್ತಿದ್ದೀಯ! ಆದರೂ ನೀನು ಸಜ್ಜನನಾಗಲು ಒಂದು ಮಾರ್ಗವಿದೆ. ಇಂದಿನಿಂದ ಎಂತಹ ಪ್ರಸಂಗ ಬಂದರೂ ಸುಳ್ಳನ್ನಾಡದೇ ಸತ್ಯವನ್ನೇ ನುಡಿ. ನಿನ್ನ ಬಯಕೆ ಫಲಿಸುತ್ತದೆ' ಎಂದರು.

ಕಳ್ಳ ತಲೆಯಾಡಿಸಿ ನಮಿಸಿ ಹಿಂತಿರುಗಿದ. ಮರುದಿನ ಇದೇ ಕೊನೆಯ ಬಾರಿ ಕಳ್ಳತನ ಮಾಡಿ ನಂತರ ಬಿಟ್ಟುಬಿಡುವುದೆಂದು ನಿರ್ಧರಿಸಿ ಮಧ್ಯರಾತ್ರಿಯಲ್ಲಿ ಸೀದಾ ರಾಜನ ಅರಮನೆಗೇ ಕಳ್ಳತನಕ್ಕೆಂದು ಹೊರಟ. ಅರಮನೆಯ ಮುಖ್ಯ ದ್ವಾರದಲ್ಲಿಯೇ ಕಾವಲಿಗಿದ್ದ ಇಬ್ಬರು ಭಟರು ಇವನನ್ನು ತಡೆದು ನಿಲ್ಲಿಸಿ 'ಯಾರು ನೀನು?' ಎಂದು ಪ್ರಶ್ನಿಸಿದರು, ಕಳ್ಳ ಸತ್ಯವನ್ನೇ ನುಡಿಯಲು ನಿರ್ಧರಿಸಿಯಾಗಿತ್ತು. 'ನಾನೊಬ್ಬ ಕಳ್ಳ' ಎಂದ.

ಕಾವಲುಗಾರರಿಗೆ ಅಚ್ಚರಿಯಾಯಿತು. ಇವನಾರೋ ಅರಸರಿಗೆ ಸಂಬಂಧಿಸಿದವನೇ ಇರಬೇಕು, ತಾವು ತಡೆದು ನಿಲ್ಲಿಸಿ ಪ್ರಶ್ನಿಸಿದುದರಿಂದ ಕೋಪಗೊಂಡು ಹೀಗೆ ನುಡಿಯುತ್ತಿದ್ದಾನೆಂದು ಭಾವಿಸಿ 'ಸ್ವಾಮಿ, ಗೊತ್ತಿಲ್ಲದೇ ಕೇಳಿದೆವು, ಕ್ಷಮಿಸಿ, ದಯವಿಟ್ಟು ಒಳಹೋಗಿ' ಎಂದು ಒಳಬಿಟ್ಟರು.

ಕಳ್ಳ ಅವಾಕ್ಕಾದ. ನೇರ ಒಳ ಹೋಗಿ ಹುಡುಕಿ ಹುಡುಕಿ ರಾಣಿಯ ಶಯ್ಯಾಗಾರದ ಮೂಲೆಯೊಂದರಲ್ಲಿದ್ದ ಆಭರಣಗಳ ಪೆಟ್ಟಿಗೆಯನ್ನೆತ್ತಿಕೊಂಡು ಹೊರಬಂದ. ಪುನಃ ಕಾವಲುಗಾರರು ಕೇಳಿದರು 'ಏನಿದು?'

ಕಳ್ಳ ಸಿಟ್ಟಿನಿಂದ 'ಆಭರಣಗಳ ಪೆಟ್ಟಿಗೆ. ಕಳವು ಮಾಡಿ ತೆಗೆದುಕೊಂಡು ಹೋಗುತ್ತಿದ್ದೇನೆ' ಎಂದ.

ಕಾವಲುಗಾರರಿಗೆ ದಿಕ್ಕೇ ತೋಚದಂತಾಯಿತು. ಇವನಾರೋ ದೊಡ್ಡ ಮನುಷ್ಯನೇ ಇರಬೇಕು, ಕೊಂಚ ಸಿಡುಕ, ನಾವು ಪ್ರಶ್ನಿಸುತ್ತಿರುವುದರಿಂದ ಹೀಗೆಲ್ಲ ಮಾತಾಡುತ್ತಿದ್ದಾನೆ. ರಾಣಿ ವಾಸದವರೇ ಯಾರೋ ಈ ಪೆಟ್ಟಿಗೆಯನ್ನು ಇವನೊಂದಿಗೆ ಕಳಿಸಿದಂತಿದೆ. ಹೀಗೆ ಯೋಚಿಸಿದವರು ಪುನಃ ಅವನ ಬಳಿ ಕ್ಷಮೆಯಾಚಿಸಿ ಹೋಗಲು ದಾರಿಬಿಟ್ಟು ಕೊಟ್ಟರು. ಕಳ್ಳ ಲಗುಬಗೆಯಿಂದ ಮನೆ ಸೇರಿ ನಿದ್ರಿಸಿದ.

ಬೆಳಗಾಯಿತು, ಅರಮನೆಯಲ್ಲಿ ಕೋಲಾಹಲ. ಮಹಾರಾಣಿಯವರ ಆಭರಣಗಳ ಪೆಟ್ಟಿಗೆ ಕಾಣೆಯಾಗಿದೆ. ಮಹಾರಾಜರು ಮುಖ್ಯ ದ್ವಾರದ ಕಾವಲುಗಾರರಿಬ್ಬರನ್ನೂ ಕರೆಯಿಸಿದರು. ಅವರು ಓಡಿಬಂದು ರಾತ್ರಿ ನಡೆದ ಸಂಗತಿಯನ್ನು ಚಾಚೂ ತಪ್ಪದೇ ಅರಸರಲ್ಲಿ ಅರಿಕೆ ಮಾಡಿಕೊಂಡರು.

ಮಹಾರಾಜರಿಗೆ ಅರ್ಥವಾಯಿತು. ತಕ್ಷಣ ದೂತರನ್ನು ಕಳಿಸಿ ಕಳ್ಳನನ್ನು ಕರೆಸಿಕೊಂಡು ಅವನಿಂದ ಎಲ್ಲ ವಿಷಯವನ್ನೂ ತಿಳಿದು ಅವನ ಸತ್ಯಸಂಧತೆಯನ್ನು ಮೆಚ್ಚಿ ಉಡುಗೊರೆ ನೀಡಿ ಸನ್ಮಾನಿಸಿದರು. ಅಂದಿನಿಂದ ತಮ್ಮ ಅಂಗರಕ್ಷಕ ಪಡೆಯ ಮುಖ್ಯಸ್ಥನನ್ನಾಗಿ ನೇಮಿಸಿಕೊಂಡರು.

'ಸತ್ಯವನ್ನೇ ನುಡಿ' ಎಂಬ ಸ್ವಾಮೀಜಿಯವರ ಉಪದೇಶದ ಆಂತರ್ಯ ಕಳ್ಳನಿಗೆ ಈಗ ಸಂಪೂರ್ಣ ಮನದಟ್ಟಾಗಿತ್ತು.

**■ ಕೆ. ಶ್ರೀನಿವಾಸ ರಾವ್**
**ಹರಪನಹಳ್ಳಿ**

## ನಿಮಗೆಷ್ಟು ಗೊತ್ತು?

ಈ ಅತ್ಯಾಕರ್ಷಕ ಪಕ್ಷಿ ಮ್ಯಾಂಡರಿನ್ ಬಾತುಕೋಳಿ (ಐಕ್ಸ್ ಗ್ಯಾಲೆರಿಕುಲೆಟ) ಇತ್ತೀಚೆಗೆ ನ್ಯೂಯಾರ್ಕ್ ನಗರದ ಸೆಂಟ್ರಲ್ ಪಾರ್ಕ್‌ನ ಕೊಳದಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡಾಗ ಜನ ನೋಡಲು ಮುಗಿಬಿದ್ದರು. ಪೂರ್ವ ಏಷ್ಯಾದ ಈ ಅಪರೂಪದ ಪಕ್ಷಿ ಉತ್ತರ ಅಮೆರಿಕಾದ ವುಡ್ ಬಾತುಕೋಳಿಯನ್ನು ಹೋಲುತ್ತದೆ. ಆದರೆ ರಂಗುರಂಗಿನ ಮೈ, ಗರಿ, ಕೊಕ್ಕಿನಿಂದ ಮನಸೆಳೆಯುವ ಈ ಪುಟ್ಟ ಬಾತು



ಕೇವಲ 41–40 ಸೆಂ.ಮೀ. ಉದ್ದವಿರುತ್ತದೆ. ಕಿತ್ತಳೆ ರಂಗಿನ ಗರಿಗಳು ದೋಣಿಯ ಹಾಯಿಯಂತೆ ಅಂಟಿಕೊಂಡಿರುತ್ತವೆ. ಜಪಾನ್‌ನಲ್ಲಿ ಸುಮಾರು 10 ಸಾವಿರ ಬಾತುಗಳಿದ್ದು, ಪೂರ್ವ ಚೀನಾದಲ್ಲೂ ಕಂಡು ಬರುತ್ತವೆ. ಕಡಲ ತಡಿಯ ಸಸ್ಯ, ಬೀಜಗಳು, ಸಣ್ಣ ಮೀನು, ಕೀಟ, ಬಸವನ ಹುಳು ಇದರ ಆಹಾರ. ಹೆಣ್ಣು ಮ್ಯಾಂಡರಿನ್ ಬಾತು 10–12 ಮೊಟ್ಟೆಗಳನ್ನಿಡುತ್ತದೆ. ಗಂಡು ಮತ್ತು ಹೆಣ್ಣು ಪಕ್ಷಿಗಳು ಜೀವನಪರ್ಯಂತ ಜೊತೆಯಾಗಿರುವುದು ವಿಶೇಷ.

**■ ಎಸ್.ಹೆಗಡೆ**